ಮಾಡಿ ಜಿಲ್ಲಾಧಿಕಾರಿಗಳಿಗೆ, ಮಾಲಿನ್ಯ ನಿಯಂತ್ರಣ ಮಂಡಲಿಗೆ ಸರ್ವೆ ನಂಬರ್ ಇದೆ ಇದನ್ನು ಸ್ವಾಧೀನಪಡಿಸಿಕೊಳ್ಳಿ ಎಂದು ಮನವಿ ಕೊಟ್ಟಿದ್ದೇನೆ. ಇನ್ನು ಮುಂದೆ ಯಾವುದೇ ಕೆಮಿಕಲ್ ಫ್ಯಾಕ್ಟರಿಗೆ ಬೀದರ್‌ನಲ್ಲಿ ಪರ್ಮಿಶನ್ ಕೊಡಬಾರದು, ಈಗಾಗಲೇ 13 ಕೆಮಿಕಲ್ ಫ್ಯಾಕ್ಟರಿಗಳಾಗಿವೆ. ಹೈದರಾಬಾದಿನಲ್ಲಿ ಟ್ರೀಟ್‌ಮೆಂಟ್ ಪ್ಲಾಂಟಿದೆ ಅಲ್ಲಿ ಹೋಗಿ ಮಾಡಿರಿ ಎಂದು ಸಚಿವರು ಹೇಳುತ್ತಿರುವುದು ಬೆಸ್ಟಿದೆ, ಫಾರೆಸ್ಟಿದೆ, ಹಾದಿಯಲ್ಲೆ ಟ್ಯಾಂಕರ್‌ನಿಂದ ಅನ್‌ಲೋಡ್ ಮಾಡುತ್ತಾರೆ. ನಮ್ಮಲ್ಲಿ ದೊಡ್ಡ ಪ್ರಾಬ್ಲಂ ಆಗಿದೆ ಮೊನ್ನೆ ಎಲೆಕ್ಷನ್‌ನ್ನು ಜನರೆಲ್ಲ ಬಾಯ್ಕಾಟ್ ಮಾಡಿದರು. ನಮ್ಮ ಏರಿಯಾದಲ್ಲಿ ಹೋಗುವುದಕ್ಕೇ ಆಗುವುದಿಲ್ಲ. ಊರಿನ ಜನರೆಲ್ಲ ಏನು ಹೇಳುತ್ತಾರೆಂದರೆ ನಮ್ಮ ಎಂಎಲ್‌ಎ ಫ್ಯಾಕ್ಟರಿಯವರಿಂದ ಕಮಿಶನ್ ತಿಂದುಬಿಟ್ಟಿದ್ದಾರೆಂದು ಅಪಪ್ರಚಾರ ಬಂದಿದೆ. ನಮ್ಮಲ್ಲಿ ಇದು ದೊಡ್ಡ ಸಮಸ್ಯೆಯಾಗಿದೆ.

ಅಧ್ಯಕ್ಷರು:- ಶಿವಣ್ಣನವರೇ ನೀವು ದಯಮಾಡಿ ಅಲ್ಲಿನ ಸ್ಥಿತಿ ಬಹಳ ಗಂಭೀರವಾಗಿರುವಂತೆ ಕಾಣುತ್ತದೆ. ಅಧಿವೇಶನ ಮುಗಿದ ಮೇಲೆ ಅಲ್ಲಿಗೆ ನಿಮ್ಮ ಅಧಿಕಾರಿಗಳನ್ನೂ ಕರೆದುಕೊಂಡು ಹೋಗಿ ಶಾಸಕರದೆಲ್ಲ ಒಂದು ಸಭೆ ಮಾಡಿ ಏನೆಲ್ಲ ಅವರು ಕಂಪ್ಲೇಂಟ್ ಹೇಳುತ್ತಿದ್ದಾರೆ, ನಿಮ್ಮ ಅಧಿಕಾರಿಗಳು ಕೊಟ್ಟಿರುವ ಮಾಹಿತಿ ಸರಿಯಿದೆಯೇ, ಒಂದು ವೇಳೆ ಸರಿಯಾಗಿರದೆ ಇದ್ದಲ್ಲಿ ಅದನ್ನು ಯಾವ ರೀತಿ ಸರಿಪಡಿಸಬೇಕೆಂದು ಎಲ್ಲಾ ಮಾಡಿಕೊಂಡು ಬಂದು ನಮಗೆ ತಿಳಿಸಿ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು:- ಇನ್ನೊಂದು ಪ್ರಶ್ನೆ ಎಂದರೆ... Sir, the situation is very serious.

MR.SPEAKER:- You have worked as a Minister. You are a senior Member. I am asking the Hon.Minister to go the spot and take all of you into confidence, find out the discrepancies and give appropriate relief.

SRI SYED ZULFIKAR HASHMI:- Why cannot he convene a meeting?

MR.SPEAKER:- It will have to be done at Bidar. He will have to go to Bidar. He is a Minister. He knows, how to solve it.

ವಿಷಯ:- ಕಪ್ಪುಹಲಗೆ ಯೋಜನೆಯಡಿಯಲ್ಲಿ ಮಂಜೂರು ಮಾಡಿದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 131 (925)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ

ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಿಹಲಗೆ ಯೋಜನೆಯಡಿಯಲ್ಲಿ ಶಿಕ್ಷಣ ಇಲಾಖೆಯು ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರು ಮಾಡಿರುವ ಹಣ ಎಷ್ಟು?

ಆ) ಸದರಿ ಮೊತ್ತದಲ್ಲಿ ಜಿಲ್ಲೆಯ ಶಿಕ್ಷಣ ಸಂಸ್ಥೆಗಳಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡಲು ಪಾವತಿಸಿದ ಮೊತ್ತವೆಷ್ಟು? ಸದರಿ ಗುತ್ತಿಗೆಯನ್ನು ಯಾರಿಗೆ ನೀಡಲಾಗಿದೆ?

ಇ) ಪೀಠೋಪಕರಣಗಳ ಗುಣಮಟ್ಟದ ಬಗ್ಗೆ ದೂರುಗಳು ಬಂದಿದೆಯೇ? ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಈ) ಪೀಠೋಪಕರಣಗಳಿಗಾಗಿ ನೀಡುವ ಮೊತ್ತವನ್ನು ಶಾಲಾಭಿವೃದ್ಧಿ ಸಮಿತಿಗೆ ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಸಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) 1994-95ರ ಕಪ್ಪುಹಲಗೆ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೂ.387.00 ಲಕ್ಷ ಹಣ ಮಂಜೂರಾಗಿದೆ.

ಆ) ಈ ಹಣದಲ್ಲಿ ಶಾಲೆಗಳಿಗೆ ತಲಾ ರೂ.15000.00ದಂತೆ ಒಟ್ಟು ರೂ.116.10 ಲಕ್ಷಗಳನ್ನು ಪೀಠೋಪಕರಣಗಳಿಗಾಗಿ ಒದಗಿಸಲಾಗಿದೆ. ಇದರಲ್ಲಿ ಪೀಠೋಪಕರಣಗಳ ಬಗ್ಗೆ ರೂ. 95.10 ಲಕ್ಷಗಳನ್ನು ಈಗಾಗಲೇ ಪಾವತಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಜಿಲ್ಲಾಮಟ್ಟದ ಸಮಿತಿಯ ತೀರ್ಮಾನದಂತೆ 250 ಶಾಲೆಗಳಿಗೆ ಸರಬರಾಜು ಮಾಡಲು ಅರಣ್ಯ ಕೈಗಾರಿಕಾ ನಿಗಮ ಪಡೀಲು, ಮಂಗಳೂರು ಮತ್ತು 524 ಶಾಲೆಗಳಿಗೆ ಸರಬರಾಜು ಮಾಡಲು ಕರ್ನಾಟಕ ಸಣ್ಣ ಕೈಗಾರಿಕಾ ಮಾರಾಟ ನಿಗಮದ ನೋಂದಣಿದಾರರಿಗೆ ಆದೇಶ ನೀಡಲಾಗಿದೆ.

ಇ) ಗುಣಮಟ್ಟದ ಬಗ್ಗೆ ಕೆಲವೊಂದು ದೂರುಗಳು ಬಂದಿದ್ದು, ಜಿಲ್ಲಾ ಪಂಚಾಯತ್ ನಿರ್ಣಯದಂತೆ ಬದಲಾಯಿಸಿ ಸರಬರಾಜು ಮಾಡಲು ಕ್ರಮ ವಹಿಸಲಾಗಿದೆ.

ಈ) ಕಲಿಕಾ ಮತ್ತು ಬೋಧನಾ ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ಜಿಲ್ಲಾಮಟ್ಟದ ಸಮಿತಿಯನ್ನು ಈಗಾಗಲೇ ರಚಿಸಲಾಗಿದೆ. ರಾಜ್ಯ ಮಟ್ಟದಿಂದ ನೀಡಿದ ಮಾರ್ಗಸೂಚಿಯನ್ವಯ ಈ ಖರೀದಿ ಪ್ರಕ್ರಿಯೆ ನಡೆಯುತ್ತಿದೆ. ಎಲ್ಲಾ ಜಿಲ್ಲೆಗಳಿಗೂ ಏಕರೂಪ ಪದ್ಧತಿಯಿದ್ದು ಶಾಲಾಭಿವೃದ್ಧಿ ಸಮಿತಿಗೆ ಈ ಕಾರ್ಯ ವಹಿಸಲು ಈ ಹಂತದಲ್ಲಿ ಸಾಧ್ಯವಿಲ್ಲ.

ಶ್ರೀ ಕುಂಬ್ಳೆ ಸುಂದರ್‌ರಾವ್:- ಅಧ್ಯಕ್ಷರೇ ಕರಿಹಲಗೆ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡದ 250 ಶಾಲೆಗಳಿಗೆ 15 ಸಾವಿರದಂತೆ ಹಣ ಮಂಜೂರಾಗಿದೆ. ಅದರಿಂದ ನಮಗೆ

ಸಂತೋಷವಾಗಬೇಕಾಗಿತ್ತು. ಈಗ ದುಃಖವಾಗುತ್ತಿದೆ. ಈ ಯೋಜನೆಯಡಿ ಬ್ಲಿಲಾ ಮಕ್ಕಳಿಗೆ ಪೀಠೋಪಕರಣ ಒದಗಿಸಿದ್ದಾರೆ. ಆದರೆ ಉದ್ದೇಶ ಈಡೇರುತ್ತಿಲ್ಲ. ಆ ಪೀಠೋಪಕರಣಗಳು ಕಳಪೆಮಟ್ಟದವು, ಉಪಯೋಗಕ್ಕೆ ಬರದವು, ಅದಕ್ಕೆ ಸಂಬಂಧಿಸಿದ ಒಂದು ದೂರನ್ನು ಸಚಿವರ ಗಮನಕ್ಕೆ ತರಬಯಸುತ್ತೇನೆ. ಒಂದು ವರ್ಷದೊಳಗೆ ಹಲಗೆಗಳು ಒಡದುಹೋಗಿವೆ, ಬೆಂಚಿನ ಕಾಲು ಬೇರೆ ಹಲಗೆ ಬೇರೆಯಾಗಿ, ಡೆಸ್ಕ್‌ಗಳು ಪ್ರಾಥಮಿಕ ಶಾಲಾ ಮಕ್ಕಳಿಗೆ ಉಪಯುಕ್ತವಾಗಿಲ್ಲ. ಆ ಡೆಸ್ಕಿನ ಹಿಂದೆ ಮಕ್ಕಳು ಕುಳಿತರೆ ಅವರು ಕಾಣಿಸುವುದಿಲ್ಲ. ಡೆಸ್ಕ್ ಹತ್ತಿ ಮಕ್ಕಳು ಕುಳಿತುಕೊಳ್ಳಬೇಕಾಗಿದೆ. ಪುಸ್ತಕ ಇಟ್ಟುಕೊಳ್ಳುವುದಕ್ಕೆ ಸ್ಥಳವಿಲ್ಲ, ನೆಲದ ಮೇಲೆ ಇಟ್ಟುಕೊಳ್ಳಬೇಕಾಗಿದೆ. ಉಪಾಧ್ಯಾಯರ ಜೊತೆ ಎದ್ದು ಮಾತಾಡಲೂ ಆಗದಂತಹ ಇಕ್ಕಟ್ಟಿನ ಡೆಸ್ಕ್ ಬೆಂಚ್‌ಗಳನ್ನು ಮಾಡಿಕೊಟ್ಟಿದ್ದಾರೆ. ಇದನ್ನು ಯಾರಿಂದ ಮಾಡಿಸಿದಿರಿ ಎಂದರೆ ಅರಣ್ಯ ಕೈಗಾರಿಕಾ ನಿಗಮ ಅಂತ ಉತ್ತರ ಸಿಗುತ್ತದೆ. ಆ ನಿಗಮ ನನ್ನ ಮನೆ ಹತ್ತಿರ ಇದೆ, ಆ ನಿಗಮದಲ್ಲಿ ಮರದ ಕೆಲಸ ಮಾಡುವಂತಹ ವಿನ್ಯಾಸ ಏನೂ ಇಲ್ಲ, ನೋಂದಣಿಗಾರರಿಗೆ ಕೊಟ್ಟು ಮಾಡಿಸಿದ್ದುದು ಎಂದು ಹೇಳುತ್ತಾರೆ. ಬಡಮಕ್ಕಳಿಗೆ ಉಪಯೋಗವಾಗುವ ಈ ಯೋಜನೆಯಲ್ಲಿ ಹಣ ತಿನ್ನುವ ವ್ಯವಸ್ಥೆಯಾಗಿದೆಯೇ ಹೊರತು ಉಪಯೋಗವೇನೂ ಇಲ್ಲ. ಎಷ್ಟೋ ಶಾಲೆಗಳಲ್ಲಿ ಡೆಸ್ಕು ಬೆಂಚುಗಳನ್ನು ಉಪಯೋಗಿಸದೆ ಮೂಲೆ ಪಾಲು ಮಾಡಿದ್ದಾರೆ. ನನ್ನ ಪ್ರಶ್ನೆ ಇಷ್ಟೆ ಇದೆ, ಈ ರೀತಿ ಯಾರು ಕಳಪೆ ಕಾಮಗಾರಿ ಮಾಡಿದ್ದಾರೋ ಅವರ ವಿರುದ್ಧ ನಿಮ್ಮ ಕ್ರಮವೇನಾದರೂ ಇದೆಯೋ? ಬದಲಾಯಿಸುವುದಾಗಿ ಹೇಳಿದ್ದೀರಿ, ಕೆಲವು ಬದಲಾಯಿಸಿದರೆ ಪ್ರಯೋಜನವಿಲ್ಲ, ಎಲ್ಲಾ ಬದಲಾಯಿಸಬೇಕಾಗಿದೆ. ಕೆಲವೊಂದು ದೂರು ಬಂದಿವೆ ಎಂದಿದ್ದೀರಿ, ಕೆಲವೊಂದು ಸರಿಯಾಗಿದೆ ತಪ್ಪಾಗಿರುವುದೇ ಬಹಳ ಇದೆ, ಈ ಕುರಿತು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಎಲ್ಲ ಶಾಲೆಗಳಲ್ಲೂ ಶಾಲಾಭಿವೃದ್ಧಿ ಸಮಿತಿ ಎಂದು ಒಂದಿದೆ. ಆ ಸಮಿತಿಗೆ ಶಾಲೆಯ ಯೋಗ್ಯತೆ ಹೆಚ್ಚಿಸಬೇಕೆನ್ನುವ ಕಳಕಳಿ ಇರುತ್ತದೆ. ನೀವು ಈ ಹಣವನ್ನು ಆ ಸಮಿತಿಗೆ ಬಿಡುಗಡೆ ಮಾಡಿ ಇಂತಹ ಪೀಠೋಪಕರಣಗಳನ್ನು ಒಳ್ಳೆಯ ರೀತಿಯಲ್ಲಿ ಮಾಡಲು ಅವಕಾಶ ಮಾಡಿಕೊಡುತ್ತೀರೋ?

ಶ್ರೀ ಹೆಚ್.ಸಿ.ಗೋವಿಂದೇಗೌಡ:- ಇದು ಕೇಂದ್ರ ಸರ್ಕಾರದಿಂದ ಬರುವ ಸವಲತ್ತು, ಪ್ರಾಥಮಿಕ ಶಿಕ್ಷಣಕ್ಕೆ ಉಪಯೋಗಿಸುವಂತಹ ಒಂದು ಯೋಜನೆ. ಆದರೆ ಸೆಂಟ್ರಲ್ ಆಗಿರಲಿ ರಾಜ್ಯದ್ದೆ ಆಗಿರಲಿ ಅನಾವಶ್ಯಕವಾಗಿ ಅನ್ಯಾಯವಾದಾಗ ಯಾರೂ ಸಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವರ್ಷ ಆಯುಕ್ತರ ನೇತೃತ್ವದಲ್ಲಿ ಶಿಕ್ಷಕರ ಒಂದು ಸಮಿತಿ ಮಾಡಿದ್ದೇವೆ. ರಾಜ್ಯಮಟ್ಟದಲ್ಲಿ ಸಿಪಿಐ ಅವರ ಅಧ್ಯಕ್ಷತೆಯಲ್ಲಿ ನುರಿತ ಉಪಾಧ್ಯಾಯರುಗಳ 12 ಜನರ ಒಂದು ಸಮಿತಿ ಮಾಡಿ, ಆ ಸಮಿತಿ ಮೂಲಕ ಆರಿಸುವ ವ್ಯವಸ್ಥೆ ಮಾಡಿದ್ದೇವೆ. ಇದರ ಮೇಲೆ ಜಿಲ್ಲಾಮಟ್ಟದಲ್ಲಿ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಇದ್ದಾರೆ, ಅವರೂ ಡಿಡಿಪಿಐಗಳು ಮತ್ತು ಪ್ರಿನ್ಸಿಪಾಲ್ ಸಿಇಒ- ಈ ತಜ್ಞರೊಳಗೊಂಡ ಸಮಿತಿಯನ್ನು ಪ್ರತಿ ಜಿಲ್ಲೆಯಲ್ಲಿ ಮಾತು ಬೆಂಗಳೂರಿನ ಕಮಿಟಿ ಏನು ತೀರ್ಮಾನ

ಮಾಡುತ್ತದೆ ಅದರ ಸ್ಯಾಂಪಲುಗಳನ್ನು ಅಲ್ಲಿಗೆ ಕಳುಹಿಸಿ ಜಿಲ್ಲಾಮಟ್ಟದಲ್ಲಿ ಅವನ್ನು ಪರೀಕ್ಷೆ ಮಾಡಿ ಆರ್ಡರ್‌ಗಳನ್ನು ಪ್ಲೇಸ್ ಮಾಡುವುದು. ಆರ್ಡರ್ ಕೊಡುವಾಗ ಜಿಲ್ಲಾಮಟ್ಟದ ತೀರ್ಮಾನದಂತೆ ನನ್ನ ಸ್ನೇಹಿತರು ಹೇಳಿದಂತೆ ಜಿಲ್ಲಾಸಮಿತಿಯ ತೀರ್ಮಾನದಂತೆ 250 ಶಾಲೆಗಳಿಗೆ ಸರಬರಾಜು ಮಾಡಲು ಕೈಗಾರಿಕಾ ನಿಗಮಕ್ಕೆ ಅದು ಸರ್ಕಾರದ್ದಾದರಿಂದ ಆದೇಶ ಕೊಟ್ಟಿದ್ದಾರೆ. ಬಾಕಿ ಸಾಮಾನುಗಳನ್ನು ಸರಬರಾಜು ಮಾಡಲಾಗುವುದಿಲ್ಲವೆಂದರು. ಅದಾದ ಮೇಲೆ 526 ಶಾಲೆಗಳಿಗೆ ಸರಬರಾಜು ಮಾಡಲು ಕರ್ನಾಟಕ ಸಣ್ಣ ಕೈಗಾರಿಕಾ ಮಾರಾಟ ನಿಗಮದಲ್ಲಿ ಆರ್ಡರ್ ಕೊಟ್ಟಿದ್ದಾರೆ. ಈ ಸಾಮಾನುಗಳು ಸರಿ ಇಲ್ಲಾಂದರೆ ಜಿಲ್ಲಾಮಟ್ಟದ ಸಮಿತಿ ಏನಿದೆ ಅವರು ಇದನ್ನು ಸರಿಪಡಿಸಬೇಕು. ನನ್ನ ಗಮನಕ್ಕೆ ಬಂದರೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಕೂಡಲೇ ಆದೇಶ ಕೊಟ್ಟು ಅಂತಹ ಸಾಮಾನುಗಳನ್ನು ಸರಬರಾಜು ಮಾಡಬಾರದೆಂದೇ ನಮ್ಮ ಉದ್ದೇಶ ಇದೆ. ಈ ದೇಶದಲ್ಲಿ ನ್ಯಾಯ ಧರ್ಮ ಮೂಲೆಗೆ ಹೋಗುತ್ತಿದೆ. ಎಲ್ಲಿ ಅನುಕೂಲಗಳು ಸಿಗಬೇಕೋ ಅಲ್ಲಿ ಅನಾನುಕೂಲಗಳು ಜಾಸ್ತಿಯಾಗಿರುವುದರಿಂದ ಈ ದುರ್‌ವ್ಯವಸ್ಥೆ ನಡೆಯುತ್ತಿರುವುದು ಇದನ್ನು ನಾವೆಲ್ಲರೂ ವಿರೋಧಿಸಬೇಕಾದ್ದೆ. ಸುಂದರರಾಯರು ಎಲ್ಲಿ ಏನು ಎಂದು ನನಗೆ ನಾಲ್ಕು ವಿಷಯ ಕಳಿಸಿ, ಕೂಡಲೇ ಎರಡು ದಿವಸದಲ್ಲಿ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬಹುದೆಂದು ಆದೇಶ ಮಾಡಿ ನಿಮಗೆ ಅಸೆಂಬ್ಲಿ ಆಗುವುದರೊಳಗೇ ತಿಳಿಸುತ್ತೇನೆ.

12. 10 ಪಿ.ಎಂ.

ಶ್ರೀ ಕುಂಬ್ಳೆ ಸುಂದರ್‌ರಾವ್:- ಶಾಲಾ ಅಭಿವೃದ್ಧಿ ಸಮಿತಿಗೆ ಕೊಡುವುದರಲ್ಲಿ ತೊಂದರೆ ಏನು? ಅವರು ಹೆಚ್ಚು ಪ್ರೀತಿಯಿಂದ ಮಾಡುತ್ತಾರೆ.

ಶ್ರೀ ಹೆಚ್.ಸಿ.ಗೋವಿಂದೇಗೌಡ:- ನಾವು ಬೋರ್ಡ್ ಇಟ್ಟುಕೊಂಡು ಡಿಡಿಪಿಐ ಇಟ್ಟುಕೊಂಡು ಸಿಇಒ ಮತ್ತು ತಜ್ಞರು ಇಟ್ಟುಕೊಂಡು ಇಂತಹ ವ್ಯತ್ಯಾಸಗಳಾಗುತ್ತಿವೆ ಎಂದು ತಾವು ಹೇಳಿದ್ದೀರಿ. ಶಾಲಾ ಅಭಿವೃದ್ಧಿ ಸಮಿತಿಗೆ ಸಂಪೂರ್ಣವಾಗಿ ಜವಾಬ್ದಾರಿ ವಹಿಸಿದರೆ, ಅದು ಸರಿಯಾಗುವುದಿಲ್ಲವೆಂದು ನನ್ನ ಮನಸ್ಸಿಗೆ ಅನ್ನಿಸುತ್ತದೆ.

ಶ್ರೀ ಕುಂಬ್ಳೆ ಸುಂದರ್‌ರಾವ್:- ಪ್ರತಿ ಶಾಲೆಗಳಿಗೆ 50 ಸಾವಿರ ರೂಪಾಯಿಗಳ ಕೇಂದ್ರ ಅನುದಾನಿತ ವಿಜ್ಞಾನ ಉಪಕರಣಗಳು ಸಪ್ಲೈ ಆಗುತ್ತಿವೆ, ಆ ಉಪಕರಣಗಳ ಮಟ್ಟ ಅತ್ಯಂತ ಕೆಳಗಿನದ್ದಾಗಿದೆ ಎಂಬ ದೂರು ಇದೆ. ಇದನ್ನು ತಾವು ಪರಿಶೀಲನೆ ಮಾಡುತ್ತೀರೋ?

ಶ್ರೀ ಹೆಚ್.ಸಿ.ಗೋವಿಂದೇಗೌಡ:- ಕನಿಷ್ಠ ಮಟ್ಟದ ಸಾಮಾನುಗಳನ್ನು ಸರಬರಾಜು ಮಾಡುವುದರಲ್ಲಿ ನಾನು ನೂರಕ್ಕೆ ನೂರರಷ್ಟು ವಿರೋಧ ಮಾಡುತ್ತೇನೆ. ಯಾವುದೇ ರೀತಿಯ ಶಾಮೀಲು ಯಾವುದೇ ರೀತಿಯಲ್ಲಿ ಇದಕ್ಕೆ ಸೇರಿಕೊಂಡು ನಾನೇಕೆ ಇಲ್ಲಿ ಕುಳಿತುಕೊಳ್ಳಬೇಕು? ಎಲ್ಲಿ ಏನು ನಡೆಯುತ್ತಿದೆ ಎಂದು ಸಂಬಂಧಪಟ್ಟ ಇಲಾಖಾ

ಮುಖ್ಯಸ್ಥರು ಮತ್ತು ಇಲಾಖಾ ಮಂತ್ರಿಗಳಿಗೆ ಯಾವುದೇ ಇಲಾಖೆಯ ವ್ಯವಹಾರ ಆದರೂ ತಿಳಿಸಬೇಕು. ಇದೊಂದೇ ಎಂದು ಅಲ್ಲ. ಎಲ್ಲಿಯವರೆಗೆ ನಾವು ಅನ್ಯಾಯದ ವಿರುದ್ಧ ಹೋರಾಡತಕ್ಕಂತಹ ಶಕ್ತಿ ಪಡೆಯುವುದಿಲ್ಲವೋ ಅಲ್ಲಿಯವರೆಗೆ ಈ ರಾಜ್ಯದಲ್ಲಿ ಸರಿಯಾದ ವ್ಯವಸ್ಥೆ ಆಗುವುದಿಲ್ಲ. ಎಲ್ಲೆಲ್ಲಿ ಏನೇನು ನಡೆದಿದೆ ಎಂದು ತಾವು ದಯವಿಟ್ಟು ಕೊಡಿ. ಇಲ್ಲವೇ ನೀವೂ ಬನ್ನಿ ನಮ್ಮ ಅಧಿಕಾರಿಗಳನ್ನು ನಿಮ್ಮ ಜೊತೆ ಕಳಿಸುತ್ತೇನೆ ಇದನ್ನು ಪರಿಹಾರ ಮಾಡಲೇಬೇಕು ತಕ್ಕಶಿಕ್ಷೆ ಕೊಡಬೇಕಾಗುತ್ತದೆ ತಾವು ಇದರ ಬಗ್ಗೆ ನೆರವು ಕೊಡಬೇಕು.

ವಿಷಯ:- ಸಸಿ ನೆಡುವ ಬಗ್ಗೆ ಸರ್ಕಾರದ ನೀತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 132 (1161)

ಶ್ರೀ ಕೆ.ವಿಶ್ವೇಶ್ವರ ಹೆಗಡೆ (ಅಂಕೋಲ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ವಿಭಾಗದಲ್ಲಿ ಎಷ್ಟು ಸಸಿಗಳನ್ನು ನೆಡಲಾಗಿದೆ.

ಆ) 1996-97ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ವಿಭಾಗದಲ್ಲಿ ಎಷ್ಟು ಸಸಿ ನೆಡಲಾಗುವುದು (ವಿಭಾಗವಾರು ವಿವರ ನೀಡುವುದು)

ಇ) 1995-96, 1996-97ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ವಿಭಾಗದಲ್ಲಿ ಯಾವ ಯಾವ ಜಾತಿಯ ಸಸಿಗಳನ್ನು ನೆಡಲಾಗಿದೆ.

ಈ) ಸಸಿ ನೆಡಲು ಸರ್ಕಾರದ ನೀತಿ ಏನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ 1995-96ನೇ ಸಾಲಿನಲ್ಲಿ ವಿವಿಧ ಅರಣ್ಯ ವಿಭಾಗಗಳಲ್ಲಿ ನೆಟ್ಟಿರುವ ಸಸಿಗಳ ವಿವರಗಳು ಈ ಕೆಳಕಂಡಂತಿವೆ.

1. ಹಳಿಯಾಲ ವಿಭಾಗ	20.462	ಲಕ್ಷ ಸಸಿಗಳು
2. ಯಲ್ಲಾಪುರ ವಿಭಾಗ	9.064	ಲಕ್ಷ ಸಸಿಗಳು
3. ಕಾರವಾರ ವಿಭಾಗ	15.173	ಲಕ್ಷ ಸಸಿಗಳು
4. ಹೊನ್ನಾವರ ವಿಭಾಗ	14.100	ಲಕ್ಷ ಸಸಿಗಳು
5. ಸಿರ್ಸಿ ವಿಭಾಗ	21.990	ಲಕ್ಷ ಸಸಿಗಳು
6. ಸಾಮಾಜಿಕ ಅರಣ್ಯ ವಿಭಾಗ	12.337	ಲಕ್ಷ ಸಸಿಗಳು